ಪಂಚ ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಲಭಿಸಲಿ

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಂಸಿ ಶಿವಾನಂದ ಸ್ವಾಮಿ

ಉದಯಕಾಲ ನ್ಯೂಸ್

ಚಿಕ್ಕಮಗಳೂರು: ರಾಜ್ಯದ ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಮತ್ತು ಅವರು ಸ್ವಾವಲಂಭಿಯಾಗಿ ಜೀವನ ನಡೆಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳು ತುಂಬಾ ಸಹಕಾರಿಯಾಗಿದೆ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಂಸಿ ಶಿವಾನಂದ ಸ್ವಾಮಿ ಹೇಳಿದರು.

ಜಿಲ್ಲಾ ಪಂಚಾಯಿತಿ ಮಿನಿ ಸಭಾಂಗಣದಲ್ಲಿ ಶನಿವಾರ ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪಂಚ ಗ್ಯಾರಂಟಿ ಯೋಜನೆಯ ಸೌಲಭ್ಯ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಲಭಿಸುವಂತೆ ನೋಡಿಕೊಳ್ಳಬೇಕು ಈ ಮಹತ್ವಕಾಂಕ್ಷಿ ಯೋಜನೆಗಳ ಲಾಭ ಅರ್ಹರಿಗೆ ತಲುಪಬೇಕು ಎಂದ ಅವರು, ಜನಸಾಮಾನ್ಯರ ಬದುಕಿನಲ್ಲಿ ಸುಭದ್ರತೆಯ ಭರವಸೆ ಮೂಡಿಸುವ ನಿಟ್ಟಿನಲ್ಲಿ ಸರ್ಕಾರ ಹಲವು ಮಹತ್ವದ ಯೋಜನೆಗಳನ್ನು ಜಾರಿಗೊಳಿಸಿದೆ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಈ ಐದು ಯೋಜನೆಗಳು ಎಲ್ಲಾ ವರ್ಗದ ಜನರಲ್ಲಿ ಅನುಕೂಲ ಒದಗಿಸಿದೆ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಸರ್ಕಾರದ ಕೆಲಸವನ್ನು ಆಸಕ್ತಿಯಿಂದ ಹಾಗೂ ಶ್ರದ್ಧೆಯಿಂದ ಅಧಿಕಾರಿಗಳು ನಿರ್ವಹಿಸಬೇಕು ಎಂದರು.



ಪಂಚ ಗ್ಯಾರಂಟಿ ಯೋಜನೆಗಳನ್ನು ಅರ್ಹರಿಗೆ ಪರಿಣಾಮಕಾರಿಯಾಗಿ ತಲುಪಿಸುವ ಉದ್ದೇಶದಿಂದ ಪ್ರತಿ ಗ್ರಾಮ ಪಂಚಾಯಿತಿ ಮತ್ತು ವಾರ್ಡ್ ಮಟ್ಟದಲ್ಲಿ ಆರು ಸದಸ್ಯರ ಗ್ಯಾರಂಟಿ ಸಮಿತಿ ರಚಿಸಿ ಆದೇಶಿಸಿದೆ ಈ ಸಮಿತಿಯಲ್ಲಿ ಎಸ್ಸಿ, ಎಸ್ಟಿ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗ ಹಾಗೂ ಸಾಮಾನ್ಯ ವರ್ಗದಲ್ಲಿ ತಲಾ ಒಬ್ಬರು ಮತ್ತು ಮಹಿಳೆಯರಿಗೆ ಎರಡು ಸ್ಥಾನಗಳನ್ನು ಮೀಸಲಿರಿಸಿದೆ, ಈ ಸಮಿತಿ ರಾಜ್ಯ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದಡಿ ಕಾರ್ಯನಿರ್ವಹಿಸಲಿದೆ ಈಗಾಗಲೇ ರಾಜ್ಯ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರು ಚಿಕ್ಕಮಗಳೂರು ಜಿಲ್ಲೆಯ ಸಮಿತಿಗಳಿಗೆ ಶಿಫಾರಸ್ಸು ಆದರಿಸಿ ಘೋಷಣೆ ಮಾಡಲಾಗಿದ್ದು ಮೈಸೂರು ವಿಭಾಗದಲ್ಲಿ ಚಿಕ್ಕಮಗಳೂರು ಜಿಲ್ಲೆ ಮೊದಲನೆಯದು ಎಂದರು.

ಜಿಲ್ಲೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ: ಯುವನಿಧಿ ಯೋಜನೆಯಡಿ ಆಗಸ್ಟ್ 2026ರ ಮಾಹೆ ವರೆಗೆ 6454 ಪಧವಿದರರು 92 ಡಿಪ್ಲೋಮೊ ಅಭ್ಯರ್ಥಿಗಳು ನೋಂದಾಹಿಸಿಕೊಂಡಿದ್ದು ಜುಲೈ ಮಾಹೆ ಅಂತ್ಯದವರೆಗೆ ರೂ.47.19 ಲಕ್ಷ ಮತ್ತು ಡಿಪ್ಲೋಮೋ ನಿರುದ್ಯೋಗಿಗಳಿಗೆ ರೂ.22,500 ನಿರುದ್ಯೋಗ ಭತ್ಯೆಯನ್ನು ಅವರ ಬ್ಯಾಂಕ್ ಖಾತೆಗೆ ಡಿ.ಬಿ.ಟಿ ಮೂಲಕ ವರ್ಗಾವಣೆ ಮಾಡಲಾಗಿದೆ. ಈ ಯೋಜನೆ ಜಾರಿಗೆ ಬಂದ ಜನವರಿ 24 ರಿಂದ ಜುಲೈ 2026 ರವರೆಗೆ ಪಧವಿದದರು ಹಾಗೂ ಡಿಪ್ಲೋಮೊ ನಿರುದ್ಯೋಗಿಗಳಿಗೆ ರೂ. 18 ಕೋಟಿ ಗಳನ್ನು ಅವರ ಖಾತೆಗೆ ನೇರವಾಗಿ ಡಿ.ಬಿ.ಟಿ ಮೂಲಕ ಜಮೆ ಮಾಡಲಾಗಿದೆ.

ಗೃಹಜ್ಯೋತಿ ಯೋಜನೆಯಡಿ 3,59,686 ಫಲಾನುಭವಿಗಳು ನೋಂದಾಹಿಸಿದ್ದು ಇವರಲ್ಲಿ 3,19,921 ಫಲಾನುಭವಿಗಳು ಸೆಪ್ಟೆಂಬರ್ 2026ರ ಅಂತ್ಯಕ್ಕೆ ಸರಕಾರದಿಂದ ಒಟ್ಟು ರೂ.446 ಕೋಟಿ ಸರ್ಕಾರ ಜಮೆ ಮಾಡಿದ್ದು ಪರಿಷ್ಕರಣೆ ಸಂದರ್ಭದಲ್ಲಿ ಜಿಲ್ಲೆಯಲ್ಲಿ 31,000 ಆರ್.ಆರ್ ಸಂಖ್ಯೆ ಫಲಾನುಭವಿಗಳು ಈ ಯೋಜನೆಯಿಂದ ಹೊರಗುಳಿಯಲು ಸ್ವಯಂ ಘೋಷಿಸಿಕೊಂಡಿದ್ದಾರೆ.

ಗೃಹಲಕ್ಷ್ಮಿ ಯೋಜನೆಯಡಿ 2,51,573 ಫಲಾನುಭವಿಗಳಿಗೆ ರೂ. 16,77,96,38 ಕೋಟಿ ಮೊತ್ತವನ್ನು ಅವರ ಖಾತೆಗೆ ಡಿ.ಬಿ.ಟಿ ಮೂಲಕ ಜಮೆ ಮಾಡಲಾಗಿದೆ. ಈ ಯೋಜನೆಯ ಸೌಲಭ್ಯ ಪಡೆಯುತ್ತಿದ್ದ 5,291 ಫಲಾನುಭವಿಗಳು ಮರಣ ಹೊಂದಿರುತ್ತಾರೆ, ಮರಣದ ನಂತರ 2,512 ಫಲಾನುಭವಿಗಳ ಖಾತೆಗೆ ಹಣ ಜಮೆ ಆಗಿರುತ್ತದೆ. ಈ ಪೈಕಿ 1,279 ಮರಣ ಫಲಾನುಭವಿಗಳ ಖಾತೆಯಿಂದ ರೂ.1,38,60,649 ಮೊತ್ತವನ್ನು ಹಿಂಪಡೆದು ಸರ್ಕಾದರ ನಿಧಿಗೆ ಜಮೆ ಮಾಡಲಾಗಿದೆ. ಸೆಪ್ಟೆಂಬರ್ 2026 ರ ಮಾಹೆಯಲ್ಲಿ 17 ಮರಣ ಹೊಂದಿದ ಫಲಾನುಭವಿಗಳಿಂದ 1,60,000 ಮೊತ್ತವನ್ನು ಸರ್ಕಾರದ ನಿಧಿಗೆ ಜಮೆ ಮಾಡಲಾಗಿದೆ.

ಶಕ್ತಿ ಯೋಜನೆ ಪ್ರಾರಂಭವಾದಗಿನಿಂದ ಇಲ್ಲಿಯವರೆಗೆ 7.58 ಕೋಟಿ ಟ್ರಿಪ್‌ಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದು ಸರ್ಕಾರದಿಂದ ರೂ.298 ಕೋಟಿ ವೆಚ್ಚಮಾಡಿದೆ. ಅನ್ನಭಾಗ್ಯ ಯೋಜನೆಯಡಿಯಲ್ಲಿ ಆಗಸ್ಟ್ 2026 ರಮಾಹೆಯಲ್ಲಿ 2,46,617 ಪಡಿತರ ಚೀಟಿಗಳಲ್ಲಿನ 8,26,474 ಕುಟುಂಬ ಸದಸ್ಯರಿಗೆ 38,130 ಕ್ವಿಂಟಾಲ್ ಅಕ್ಕಿಯನ್ನು ವಿತರಣೆ ಮಾಡಲಾಗಿದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಉಪನಿರ್ದೇಶಕ ಯೋಗಾನಂದ ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಭಂವರ್ ಸಿಂಗ್ ಮೀನಾ, ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ರಾಜ್ ಗೋಪಾಲ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸಮೀವುಲ್ಲಾ ಷರೀಫ್ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲ್ಲೂಕು ಗ್ಯಾರಂಟಿ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು ಹಾಜರಿದ್ದರು.

ಅ.23ರಂದು ಬ್ರಹ್ಮಶ್ರೀ ನಾರಾಯಣ ಗುರು ಸಮಾಜ ಸೇವಾ ಸಂಘದ ಸುವರ್ಣ ಮಹೋತ್ಸವ



ಉದಯಕಾಲ ನ್ಯೂಸ್

ಮೂಡಿಗೆರೆ : ತಾಲೂಕು ಬ್ರಹ್ಮಶ್ರೀ ನಾರಾಯಣ ಗುರು ಸಮಾಜ ಸೇವಾ ಸಂಘ ಪ್ರಾರಂಭವಾಗಿ 50 ವರ್ಷ ತುಂಬಿದ್ದು, ಈ ಹಿನ್ನಲೆಯಲ್ಲಿ ಅ.23ರಂದು ಸುವರ್ಣ ಮಹೋತ್ಸವ ಹಾಗೂ ಗಂಗನಮಕ್ಕಿಯಲ್ಲಿ ನಿರ್ಮಾಣಗೊಂಡಿರುವ ಸುಮುದಾಯದ ಸುವರ್ಣ ಸಂಭ್ರಮ ಕಟ್ಟಡ ಉದ್ಘಾಟನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಮನೋಜ್ ಕುಮಾರ್ ಹೇಳಿದರು.

ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ 9 ಗಂಟೆಗೆ ಪಟ್ಟಣದ ಪ್ರವಾಸಿ ಮಂದಿರದಿಂದ ಗಂಗನಮಕ್ಕಿವರೆಗೆ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಯಲಿದ್ದು, ನಂತರ ಸೋಲೂರು ಆರ್ಯ ಈಡಿಗ ಮಹಾ ಸಂಸ್ಥಾನ ಮಠದ ಶ್ರೀ ವಿಖ್ಯಾತನಂದ ಸರಸ್ವತಿ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಲಿದ್ದಾರೆ. ಮುಖ್ಯ ಅತಿಥಿಯಾಗಿ ಸಂಸದ ಕೋಟಾ ಶ್ರೀನಿವಾಸ್ ಪೂಜಾರಿ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾಧ್, ಶಾಸಕಿ ನಯನಾ ಮೋಟಮ್ಮ, ರಾಷ್ಟ್ರೀಯ ಬಿಲ್ಲವ ಮಹಾ ಮಂಡಳಿ ಅಧ್ಯಕ್ಷ ಸೂರ್ಯಕಾಂತ್ ಜಯಸುವರ್ಣ, ಶ್ರೀ ಕ್ಷೇತ್ರ ಕುದ್ರೋಳಿ ಗೋಕರ್ಣಾಥೇಶ್ವರ ದೇವಸ್ಥಾನದ ಕೋಶಾಧಿಕಾರಿ ಆರ್.ಪದ್ಮರಾಜ್, ಬಿಲ್ಲವರ ಅಸೋಸಿಯೇಶನ್ ಅಧ್ಯಕ್ಷ ವೇದಕುಮಾರ್, ಬ್ರಹ್ಮಶ್ರೀ ನಾರಾಯಣಗುರು ಸಮಾಜ ಸೇವಾಸ ಸಂಘದ ರಾಜ್ಯಾಧ್ಯಕ್ಷ ಸತ್ಯಜಿತ್ ಸುರತ್ಕಲ್, ಕಾರ್ಕಳ ಶಾಸಕ ಸುನೀಲ್ ಕುಮಾರ್, ವಿಧಾನ ಪರಿಷತ್ ಮಾಜಿ ಉಪಸಭಾಪತಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಸಭಾ ಕಾರ್ಯಕ್ರಮದ ಬಳಿಕ ಸಮುದಾಯದ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಸಮುದಾಯದವರೆಲ್ಲರೂ ಆಗಮಿಸಬೇಕೆಂದು ಮನವಿ ಮಾಡಿದರು.

ಸಂಘದ ಗೌರವಾಧ್ಯಕ್ಷರಾದ ಸುರೇಶ್‌ಪೂಜಾರಿ, ಯೋಗೇಶ್ ಪೂಜಾರಿ, ಕೇಶವ ಸುವರ್ಣ, ಎಂ.ಜಿ.ನಾಗರತ್ನ, ಕೇಶವ ಸುವರ್ಣ, ಉಪಾಧ್ಯಕ್ಷರಾದ ಗಿರೀಶ್‌ಪೂಜಾರಿ, ಗಣೇಶ್ ಪೂಜಾರಿ, ಕಾರ್ಯದರ್ಶಿ ಭರತ್ ಪೂಜಾರಿ, ಮಹಿಳಾ ಘಟಕದ ಅಧ್ಯಕ್ಷೆ ಸುಪ್ರಿಯಾ, ಹರೀಶ್ ಪೂಜಾರಿ, ಟಿ.ಗೋವಿಂದ, ಅರುಣ್ ಪೂಜಾರಿ, ಸಾಗರ್ ಪೂಜಾರಿ, ರಾಜು ಪೂಜಾರಿ, ಪೃಥ್ವಿ ಸಾಗರ್ ಉಪಸ್ಥಿತರಿದ್ದರು.

ಯುವನಿಧಿ ಫಲಾನುಭವಿಗಳಿಗೆ ಕೌಶಲ್ಯ ತರಬೇತಿ:ಸಮಾಲೋಚನ ಕಾರ್ಯಗಾರ

ಉದಯಕಾಲ ನ್ಯೂಸ್

ಚಿಕ್ಕಮಗಳೂರು: ಜಿಲ್ಲೆಯ ಯುವನಿಧಿ ಫಲಾನುಭವಿಗಳಿಗೆ ಸರ್ಕಾರಿ ಕೈಗಾರಿಕಾ ಸಂಸ್ಥೆಗಳಲ್ಲಿ ಯುವನಿಧಿ ಪ್ಲಸ್ ಯೋಜನೆಯಡಿ ಕೌಶಲ್ಯ ತರಬೇತಿಯನ್ನು ಆರಂಭಿಸಲಾಗುತ್ತಿದೆ. ಈ ಕುರಿತು ಅಕ್ಟೋಬರ್ 28 ರಿಂದ 31 ರವರೆಗೆ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಗಳಲ್ಲಿ ಸಮಾಲೋಚನಾ ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ.

ಕಳಸ, ಮೂಡಿಗೆರೆ, ಚಿಕ್ಕಮಗಳೂರು ತಾಲ್ಲೂಕು, ಅಕ್ಟೋಬರ್ 28 ರಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಕೆ.ಎಂ ರಸ್ತೆ, ಚಿಕ್ಕಮಗಳೂರುನಲ್ಲಿ,, ಕೊಪ್ಪ, ಎನ್.ಆರ್.ಪುರ, ಶೃಂಗೇರಿ ತಾಲ್ಲೂಕು ಅಕ್ಟೋಬರ್ 29 ರಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಗುಣವಂತೆ ರಸ್ತೆ ಕೊಪ್ಪದಲ್ಲಿ,, ತರೀಕೆರೆ, ಅಜ್ಜಂಪುರ ತಾಲ್ಲೂಕು ಅಕ್ಟೋಬರ್ 30 ರಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಅರಮನೆ ಹೋಟೆಲ್ ಹಿಂಭಾಗ ತರೀಕೆರೆಯಲ್ಲಿ ಹಾಗೂ ಕಡೂರು ತಾಲ್ಲೂಕು ಅಕ್ಟೋಬರ್ 31 ರಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಕೆ.ಎಸ್.ಆರ್.ಟಿ.ಸಿ ಡಿಪೊ ಮುಂಭಾಗ, ಕಡೂರುನಲ್ಲಿ ಏರ್ಪಡಿಸಲಾಗಿದ್ದು ಫಲಾನುಭವಿಗಳು ಈ ದಿನಗಳಂದು ಬೆಳಗ್ಗೆ 10:30ಕ್ಕೆ ಸಂಬಂಧಿಸಿದ ತಾಲ್ಲೂಕಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಹಾಜರಾಗಬಹುದುದಾಗಿದೆ.

ಯಶಸ್ವಿಕಂಡ ಮಾಸಿಕ ಸಂತೆ



ಉದಯಕಾಲ ನ್ಯೂಸ್, ಬಾಳೆಹೊನ್ನೂರು: ಸರ್ಕಾರವು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಅನೇಕ ಸೌಲಭ್ಯಗಳನ್ನು ಅದನ್ನು ಸಮರ್ಪಕವಾಗಿ ಬಳಸಿಕೊಂಡು ಆರ್ಥಿಕ ಸಬಲೀಕರಣ ಸಾಧಿಸಬೇಕೆಂದು ಆತ್ಮೀಯ ಶ್ರೀ ಶಕ್ತಿ ಸಂಘದ ಅಧ್ಯಕ್ಷ ವಿಶಾಲ ಆರ್ ಶೆಟ್ಟಿ ತಿಳಿಸಿದರು. ಪಟ್ಟಣದ ಮುಖ್ಯರಸ್ತೆಯ ಮಾರಿಕಾಂಬ ದೇವಸ್ಥಾನದ ಮುಂಭಾಗದ ರಸ್ತೆ ಪಕ್ಕದಲ್ಲಿ ನರಸಿಂಹರಾಜಪುರ ತಾಲೂಕು ಪಂಚಾಯಿತಿ ಬಿ ಕಣಬೂರು ಸಂಜೀವಿನಿ ಗ್ರಾಮ ಪಂಚಾಯಿತಿ ಒಕ್ಕೂಟ ಹಮ್ಮಿಕೊಂಡಿದ್ದ ಮಾಸಿಕ ಸಂತೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸ್ತ್ರೀಶಕ್ತಿ ಸ್ವ ಸಹಾಯ ಸಂಘದವರು ತಾವು ತಯಾರಿಸಿದ ವಸ್ತುಗಳನ್ನು ಈ ಸಂತೆಯಲ್ಲಿ ಇಟ್ಟು ಮಾರಾಟ ಮಾಡುತ್ತಾರೆ ಇದರಿಂದ ಮಹಿಳೆಯರಿಗೆ ಆರ್ಥಿಕ ಸಬಲೀಕರಣಕ್ಕೆ ಸಹಾಯಕವಾಗಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಒಕ್ಕೂಟದ ಉಪಾಧ್ಯಕ್ಷರು ಹೂವಮ್ಮ ಕಾರ್ಯದರ್ಶಿಯವರಾದ ಸ್ಟೆಲ್ಲಾ , ಎಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರು, ವಿನುತಾ ಕೃಷಿಯೇತರ ವ್ಯವಸ್ಥಾಪಕರು, - ಕವನ ಮಮತಾ , ಕವಿತಾ, ಹಾಗೂ ಸರಸ್ವತಿ ಹಾಗೂ ಸುನಿತಾ, ಎಲ್ಲಾ ಸ್ವಸಹಾಯ ಸಂಘದ ಸದಸ್ಯರು ಭಾಗವಹಿಸಿದರು. ಸಂಜೀವಿನಿ ಒಕ್ಕೂಟದ ಸ್ವ ಸಹಾಯ ಸಂಘದ ಒಟ್ಟು 16 ಮಳಿಗೆಗಳು ಭಾಗವಹಿಸುವ ಮೂಲಕ ಮಾಸಿಕ ಸಂತೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಯಿತು.

ಪ್ರತಿದಿನ ಉದಯಕಾಲ ಓದಿರಿ

ನಾಳೆ ಪೊಲೀಸ್ ಹುತಾತ್ಮರ ದಿನಾಚರಣೆ

ಉದಯಕಾಲ ನ್ಯೂಸ್, ಚಿಕ್ಕಮಗಳೂರು : ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ 2026-27ನೇ ಸಾಲಿನಲ್ಲಿ ಕರ್ತವ್ಯ ಪಾಲನೆಯಲ್ಲಿ ಹುತಾತ್ಮರಾದ ಪೊಲೀಸ್ ಅಧಿಕಾರಿಗಳ ಸ್ಮರಣೆಗಾಗಿ ಅಕ್ಟೋಬರ್ 21 ರಂದು ಬೆಳಿಗ್ಗೆ 08-00 ಗಂಟೆಗೆ ಜಿಲ್ಲಾ ಪೊಲೀಸ್ ಸಶಸ್ತ್ರ ಮೀಸಲು ಪಡೆ ಹುತಾತ್ಮರ ಸ್ಮಾರಕ ಆವರಣ, ರಾಮನಹಳ್ಳಿಯಲ್ಲಿ ''ಪೊಲೀಸ್ ಹುತಾತ್ಮರ ದಿನಾಚರಣೆ''ಯನ್ನು ಆಯೋಜಿಸಲಾಗಿದೆ. ಚಿಕ್ಕಮಗಳೂರು ವೃತ್ತದ, ಅರಣ್ಯ ಸಂರಕ್ಷಣಾಧಿಕಾರಿ ಯಶ್‌ಪಾಲ್ ಕ್ಷೀರಸಾಗರ್ ಮುಖ್ಯ ಅತಿಥಿಗಳಾಗಿ, ಜಿಲ್ಲಾಧಿಕಾರಿ ಭಂವರ್ ಸಿಂಗ್ ಮೀನಾ, ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕ್ಷೇತ್ರ ನಿರ್ದೇಶಕ ಪುಲ್ಕೀತ್ ಮೀನಾ, ಚಿಕ್ಕಮಗಳೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೆ. ಟಿ. ಬೋರಯ್ಯ, ವಿಶೇಷ ಆಹ್ವಾನಿತರಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

UGRO CAPITAL

ಯು ಗ್ರೋ ಕ್ಯಾಪಿಟಲ್ ಲಿಮಿಟೆಡ್

ನೋಂದಾಯಿತ ಕಚೇರಿ ವಿಳಾಸ: ಬಿ –17, ನಾಲ್ಕನೇ ಮಹಡಿ, ಆರ್ಟ್ ಗಿಲ್ಡ್ ಹೌಸ್, ಫೀನಿಕ್ಸ್ ಮಾರ್ಕೆಟ್ ಸಿಟಿ, ಕುರ್ಲಾ (ಪಶ್ಚಿಮ), ಮುಂಬೈ– 400070

ಡಿಮ್ಯಾಂಡ್ ನೋಟಿಸ್

ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ, 2002 ("ಕಾಯ್ದೆ") ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002, ("ನಿಯಮಗಳು") ನಿಬಂಧನೆಗಳ ಅಡಿಯಲ್ಲಿ

ಕೆಳಗೆ ಸಹಿ ಮಾಡಿರುವವರು UGRO ಕ್ಯಾಪಿಟಲ್ ಲಿಮಿಟೆಡ್ನ ಅಧಿಕೃತ ಅಧಿಕಾರಿಯಾಗಿದ್ದು, ಕಾಯ್ದೆಯ ಸೆಕ್ಷನ್ 13(2) ರ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ನಿಯಮ 3 ರೊಂದಿಗೆ ಓದಿ, ಕಾಯ್ದೆಯ ಸೆಕ್ಷನ್ 13(2) ರ ಅಡಿಯಲ್ಲಿ ಡಿಮ್ಯಾಂಡ್ ನೋಟಿಸ್(ಗಳನ್ನು) ಹೊರಡಿಸಿದ್ದಾರೆ, ಈ ಕೆಳಗಿನ ಸಾಲಗಾರರು ಈ ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ಸಂಬಂಧಿತ ನೋಟಿಸ್(ಗಳಲ್ಲಿ) ಉಲ್ಲೇಖಿಸಲಾದ ಮೊತ್ತವನ್ನು ಮರುಪಾವತಿಸುವಂತೆ ಕರೆ ನೀಡಿದ್ದಾರೆ. ಸಾಲಗಾರರು ಡಿಮ್ಯಾಂಡ್ ನೋಟಿಸ್(ಗಳ) ಸೇವೆಯನ್ನು ತಪ್ಪಿಸುತ್ತಿದ್ದಾರೆ ಎಂದು ಕೆಳಗೆ ಸಹಿ ಮಾಡಿರುವವರು ಸಮಂಜಸವಾಗಿ ನಂಬುತ್ತಾರೆ, ಆದ್ದರಿಂದ ಡಿಮ್ಯಾಂಡ್ ನೋಟೀಸ್ನ ಸೇವೆಯನ್ನು ನಿಯಮಗಳ ಪ್ರಕಾರ ಅಂಟಿಸುವ ಮತ್ತು ಪ್ರಕಟಿಸುವ ಮೂಲಕ ಮಾಡಲಾಗುತ್ತಿದೆ.

ಕ್ರಮ ಸಂಖ್ಯೆ	ಸಾಲಗಾರರ ಹೆಸರು(ಗಳು)	ಡಿಮ್ಯಾಂಡ್ ನೋಟಿಸ್ ದಿನಾಂಕ ಮತ್ತು ಮೊತ್ತ
1	1) ಎನ್ ಜೆ ಮುನ್ನಾ ಟ್ರೇಡರ್ಸ್ 2) ಶಫಿ ಮುನ್ನಿಸ ಎನ್ 3) ಅಫ್ರಿನ್ ಖಾನಮ್ LAN-UGDAVMS0000071049	ಡಿಮ್ಯಾಂಡ್ ನೋಟಿಸ್ ದಿನಾಂಕ: 09–ಅಕ್ಟೋಬರ್–2026 ನೋಟಿಸ್ ಮೊತ್ತ: 46,45,758.00/– (ರೂ. ನಲವತ್ತಾರು ಲಕ್ಷದ ನಲವತ್ತೈದು ಸಾವಿರದ ಏಳುನೂರ ಐವತ್ತೆಂಟು ಮಾತ್ರ) 06/10/2026 ರಂತೆ

ಸುರಕ್ಷಿತ ಆಸ್ತಿ(ಗಳ) ವಿವರಣೆ– ಆಸ್ತಿ 1– ಸ್ಥಿರ ಆಸ್ತಿ ಹೊಂದಿರುವ ಸೈಟ್ನ ಎಲ್ಲಾ ಭಾಗ ಮತ್ತು ವಿಭಾಗಗಳು 217. ಸೈ ನಂ.20/3, 20/4, 21/3, 21/5, 22/3, 22/8, ಮತ್ತು ಸೈ ನಂ. 19/2, 19/3, 19/4, 19/5, 19/6 ಪಕ್ಕದಲ್ಲಿ, ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ X ಉತ್ತರದಿಂದ ದಕ್ಷಿಣಕ್ಕೆ 15 ಅಡಿ ಅಳತೆ. ಇದರ ಒಟ್ಟು ವಿಸ್ತೀರ್ಣ 600 ಚದರ ಅಡಿ. ದಾವಣಗೆರೆ ಪಟ್ಟಣದ ದೊಡ್ಡಬೂದಿಹಾಳ ಗ್ರಾಮದಲ್ಲಿದೆ. ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಗಡಿ ಮಾಡಲಾಗಿದೆ **ಮತ್ತು ಸುತ್ತುವರಿದಿದೆ:** ಉತ್ತರ: ಸೈಟ್ ಸಂಖ್ಯೆ218. ದಕ್ಷಿಣ: ಸೈಟ್ ಸಂಖ್ಯೆ216. ಪೂರ್ವ: 25 ಅಡಿ ರಸ್ತೆ ಪಶ್ಚಿಮ: ಸೈಟ್ ಸಂಖ್ಯೆ224. ಆಸ್ತಿ 2– ಸ್ಥಿರ ಆಸ್ತಿ ಹೊಂದಿರುವ ಸೈಟ್ ಸಂಖ್ಯೆ218 ರ ಎಲ್ಲಾ ಭಾಗ. ಸೈಟ್ ನಂ.20/3, 20/4, 21/3, 21/5, 22/3, 22/8, ಮತ್ತು ಸೈಟ್ ನಂ. 19/2, 19/3, 19/4, 19/5, 19/6 ಪಕ್ಕದಲ್ಲಿ, ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ X ಉತ್ತರದಿಂದ ದಕ್ಷಿಣಕ್ಕೆ 15 ಅಡಿ ಅಳತೆ. ಇದರ ಒಟ್ಟು ವಿಸ್ತೀರ್ಣ 600 ಚದರ ಅಡಿ. ದಾವಣಗೆರೆ ಪಟ್ಟಣದ ದೊಡ್ಡಬೂದಿಹಾಳ ಗ್ರಾಮದಲ್ಲಿದೆ. ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ **ಗಡಿಗಳು:** ಉತ್ತರ: ಸೈಟ್ ಸಂಖ್ಯೆ219 & 220. ದಕ್ಷಿಣ: ಸೈಟ್ ಸಂಖ್ಯೆ217. ಪೂರ್ವ: 25 ಅಡಿ ರಸ್ತೆ ಪಶ್ಚಿಮ: ಸೈಟ್ ಸಂಖ್ಯೆ223.

ಸಾಲಗಾರರು/ರು ಡಿಮ್ಯಾಂಡ್ ನೋಟಿಸ್ (ಗಳನ್ನು) ಪಾಲಿಸಲು ಮತ್ತು ಅದರಲ್ಲಿ ಮತ್ತು ಇಲ್ಲಿ ಉಲ್ಲೇಖಿಸಲಾದ ಬೇಡಿಕೆ ಮೊತ್ತವನ್ನು ಈ ಪ್ರಕಟಣೆಯ ದಿನಾಂಕದಿಂದ 60 ದಿನಗಳ ಒಳಗೆ ಅನ್ವಯವಾಗುವ ಬಡ್ಡಿ, ವಿಳಂಬ ಪಾವತಿ ದಂಡ, ಬೌನ್ಸ್ ಶುಲ್ಕಗಳು, ವೆಚ್ಚ ಮತ್ತು ವೆಚ್ಚಗಳು ಇತ್ಯಾದಿಗಳೊಂದಿಗೆ ಪಾವತಿಸಲು ಸೂಚಿಸಲಾಗಿದೆ. UGRO ಕ್ಯಾಪಿಟಲ್ ಲಿಮಿಟೆಡ್ ಸುರಕ್ಷಿತ ಸಾಲಗಾರ ಎಂಬುದನ್ನು ಸಾಲಗಾರರು ಗಮನಿಸಬಹುದು ಮತ್ತು ಸಾಲಗಾರರು ಪಡೆಯುವ ಸಾಲ ಸೌಲಭ್ಯವು ಸ್ಥಿರ ಆಸ್ತಿ(ಗಳು) ವಿರುದ್ಧ ಸುರಕ್ಷಿತ ಸಾಲವಾಗಿದೆ, ಇದು ಸಾಲಗಾರರು UGRO ಕ್ಯಾಪಿಟಲ್ ಲಿಮಿಟೆಡ್ನಲ್ಲಿ ಅಡಮಾನ ಇಟ್ಟಿರುವ ಸುರಕ್ಷಿತ ಆಸ್ತಿ(ಗಳು) ಆಗಿರುತ್ತದೆ. ಸಾಲಗಾರರು ನಿಗದಿತ ಸಮಯದೊಳಗೆ ತಮ್ಮ ಹೊಣೆಗಾರಿಕೆಗಳನ್ನು ಪೂರ್ಣವಾಗಿ ಪೂರೈಸಲು ವಿಫಲವಾದರೆ, UGRO ಕ್ಯಾಪಿಟಲ್ ಲಿಮಿಟೆಡ್ ಸುರಕ್ಷಿತ ಆಸ್ತಿ(ಗಳನ್ನು) ಸ್ವಾಧೀನಪಡಿಸಿಕೊಳ್ಳಲು ಕಾಯಿದೆಯ ಸೆಕ್ಷನ್ 13(4) ರ ಅಡಿಯಲ್ಲಿ ಎಲ್ಲಾ ಹಕ್ಕುಗಳನ್ನು ಚಲಾಯಿಸಲು ಅರ್ಹವಾಗಿರುತ್ತದೆ, ಇದರಲ್ಲಿ ಸಾಲಗಾರರ ಸಾಲ ಖಾತೆಯಲ್ಲಿ ಬಾಕಿಗಳನ್ನು ವಸೂಲಿ ಮಾಡಲು ಮಾರಾಟದ ಮೂಲಕ ಅಥವಾ ಕಾಯ್ದೆ ಮತ್ತು ಅದರ ಅಡಿಯಲ್ಲಿರುವ ನಿಯಮಗಳ ಅಡಿಯಲ್ಲಿ ಲಭ್ಯವಿರುವ ಯಾವುದೇ ಪರಿಹಾರವನ್ನು ಅನ್ವಯಿಸುವ ಮೂಲಕ ಸೇರಿದೆ. ಮಾರಾಟ ಅಥವಾ ಮಾರಾಟ ಅಥವಾ ವರ್ಗಾವಣೆಯ ಹಕ್ಕನ್ನು ಜಾರಿಗೊಳಿಸುವ ಮೊದಲು ಸುರಕ್ಷಿತ ಆಸ್ತಿ(ಗಳನ್ನು) ಲಗತ್ತಿಸಲು ಮತ್ತು/ಅಥವಾ ಸೀಲ್ ಮಾಡಲು UGRO ಕ್ಯಾಪಿಟಲ್ ಲಿಮಿಟೆಡ್ಗೆ ಅಧಿಕಾರವಿದೆ. ಸುರಕ್ಷಿತ ಆಸ್ತಿ(ಗಳ) ಮಾರಾಟದ ನಂತರ, ಸಾಲಗಾರರು UGRO ಕ್ಯಾಪಿಟಲ್ ಲಿಮಿಟೆಡ್ಗೆ ಪಾವತಿಸಬೇಕಾದ ಬಾಕಿಗಳನ್ನು ಸರಿದೂಗಿಸಲು ಸುರಕ್ಷಿತ ಆಸ್ತಿ(ಗಳ) ಮೌಲ್ಯವು ಸಾಕಷ್ಟಿಲ್ಲದಿದ್ದರೆ, ಬಾಕಿ ಬಾಕಿಗಳನ್ನು ಮರುಪಡೆಯಲು UGRO ಕ್ಯಾಪಿಟಲ್ ಲಿಮಿಟೆಡ್ ಪ್ರತ್ಯೇಕ ಕಾನೂನು ಕ್ರಮಗಳನ್ನು ಪ್ರಾರಂಭಿಸುವ ಹಕ್ಕನ್ನು ಹೊಂದಿದೆ. ಈ ಪರಿಹಾರವು ಯಾವುದೇ ಇತರ ಕಾನೂನಿನ ಅಡಿಯಲ್ಲಿ UGRO ಕ್ಯಾಪಿಟಲ್ ಲಿಮಿಟೆಡ್ಗೆ ಲಭ್ಯವಿರುವ ಎಲ್ಲಾ ಇತರ ಪರಿಹಾರಗಳಿಂದ ಹೆಚ್ಚುವರಿಯಾಗಿ ಮತ್ತು ಸ್ವತಂತ್ರವಾಗಿದೆ. ಸುರಕ್ಷಿತ ಆಸ್ತಿ(ಗಳನ್ನು) ಪುನಃ ಪಡೆದುಕೊಳ್ಳಲು ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ ಕಾಯಿದೆಯ ಸೆಕ್ಷನ್ 13(8) ಮತ್ತು ಕಾಯಿದೆಯ ಸೆಕ್ಷನ್ 13(13) ಕ್ಕೆ ಸಾಲಗಾರರ ಗಮನವನ್ನು ಆಹ್ವಾನಿಸಲಾಗಿದೆ, ಇದರ ಮೂಲಕ ಸಾಲಗಾರರು ಸುರಕ್ಷಿತ ಆಸ್ತಿ(ಗಳನ್ನು) ವಿಲೇವಾರಿ ಮಾಡುವುದರಿಂದ ಅಥವಾ ವ್ಯವಹರಿಸುವುದರಿಂದ ಅಥವಾ ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ (ಸಾಮಾನ್ಯ ವ್ಯವಹಾರದ ರೀತಿಯಲ್ಲಿ ಹೊರತುಪಡಿಸಿ) ಯಾವುದೇ ಸುರಕ್ಷಿತ ಆಸ್ತಿ(ಗಳನ್ನು) ವರ್ಗಾಯಿಸುವುದರಿಂದ ನಿರ್ಬಂಧಿಸಲಾಗಿದೆ/ನಿಷೇಧಿಸಲಾಗಿದೆ. ಮೇಲಿನವು ಕಾಯಿದೆಯ ಸೆಕ್ಷನ್ 29 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದೆ. ಡಿಮ್ಯಾಂಡ್ ನೋಟಿಸ್(ಗಳ) ಪ್ರತಿಯು ಕೆಳಗೆ ಸಹಿ ಮಾಡಿರುವವರ ಬಳಿ ಲಭ್ಯವಿದೆ ಮತ್ತು ಸಾಲಗಾರರು(ಗಳು) ಬಯಸಿದರೆ, ಕೆಳಗೆ ಸಹಿ ಮಾಡಿರುವವರಿಂದ ಅದನ್ನು ಪಡೆಯಬಹುದು.

ಸ್ಥಳ: ಕರ್ನಾಟಕ ಸಹಿ/– (ಅಧಿಕೃತ ಅಧಿಕಾರಿ)
ದಿನಾಂಕ: 20/10/2026 ಯು ಗ್ರೋ ಕ್ಯಾಪಿಟಲ್ ಲಿಮಿಟೆಡ್ಗಾಗಿ authorised.officer@ugrocapital.com

equitas Small Finance Bank

ಇಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ (ಹಿಂದೆ ಇಕ್ವಿಟಾಸ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ನೋಂದಾಯಿತ ಕಚೇರಿ - ಸಂಖ್ಯೆ 769, ಸ್ಪೆನ್ಸರ್ ಪ್ಲಾಜಾ 4ನೇ ಮಹಡಿ, ಹಂತ II, ಅಣ್ಣಾ ಸಲೈ, ಚೆನ್ನೈ, ತಮಿಳುನಾಡು- 600002, ದೂರವಾಣಿ: 044- 42995000, 044-42995050

ಸ್ಥಿರ ಆಸ್ತಿಯ ಮಾರಾಟದ ಸೂಚನೆ

ಅನುಬಂಧ IV-A [ನಿಯಮ 8(6) ರ ನಿಬಂಧನೆಯನ್ನು ನೋಡಿ] – ಸ್ಥಿರ ಆಸ್ತಿಗಳ ಮಾರಾಟದ ಸೂಚನೆ

2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8 (6) ರ ನಿಬಂಧನೆಯೊಂದಿಗೆ ಓದಲಾದ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ರ ಅಡಿಯಲ್ಲಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ. ಇಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ನ ಅಧಿಕೃತ ಅಧಿಕಾರಿ, ಸುರಕ್ಷಿತ ಸಾಲಗಾರರು ಸ್ವಾಧೀನಪಡಿಸಿಕೊಂಡಿರುವ, ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟ್‌ಗೆ ಅಡಮಾನ ಮಾಡಲಾಗಿದೆ/ಚಾರ್ಜ್ ಮಾಡಲಾಗಿದೆ, ಅದನ್ನು "ಎಲ್ಲಿ ಇದೆಯೋ ಹಾಗೆಯೇ", "ಏನಿದೆಯೋ ಹಾಗೆಯೇ" ಮತ್ತು "ಕೆಳಗೆ ತಿಳಿಸಲಾದ ಖಾತೆಗಳಲ್ಲಿ ಬಾಕಿಗಳನ್ನು ವಸೂಲಿ ಮಾಡಲು ಆಧಾರವಿದೆಯೋ ಅಲ್ಲಿ ಮಾರಾಟ ಮಾಡಲಾಗುತ್ತದೆ ಎಂದು ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು, ಅಡಮಾನದಾರರು ಮತ್ತು ಖಾತರಿದಾರರಿಗೆ ಸೂಚನೆ ನೀಡಲಾಗಿದೆ. ಸಾಲಗಾರರು/ ಜಾಮೀನುದಾರರು/ ಸುರಕ್ಷಿತ ಆಸ್ತಿ ಬಾಕಿಗಳ ಮೀಸಲು ಬೆಲೆ/ಇ-ಹರಾಜು ದಿನಾಂಕ ಮತ್ತು ಸಮಯ ಮತ್ತು ಬಿಡ್ ಹೆಚ್ಚಳ ಮೊತ್ತದ ವಿವರಗಳನ್ನು ಕೆಳಗೆ ಉಲ್ಲೇಖಿಸಲಾಗಿದೆ.

ಕ್ರ. ಸಂ.	ಸಾಲಗಾರರು/ ಅಡಮಾನದಾರರು/ ಜಾಮೀನುದಾರರ ಹೆಸರು ಮತ್ತು ವಿಳಾಸ	ತಿಳಿದಿರುವ ಹೊರೆಗಳನ್ನು ಹೊಂದಿರುವ ಸ್ಥಿರ ಆಸ್ತಿಗಳ ವಿವರಣೆ, ಯಾವುದಾದರೂ ಇದ್ದರೆ	ಮೀಸಲು ಬೆಲೆ ಇಎಂಡಿ ಬೆಲೆ ಮತ್ತು ಬಿಡ್ ಬೆಲೆ ಏರಿಕೆ	ಇ-ಹರಾಜಿನ ದಿನಾಂಕ ಮತ್ತು ಸಮಯ	ಸಾಲ / ಒಟ್ಟು ಬಾಕಿಗಳು
1.	**ಶ್ರೀ/ಶ್ರೀಮತಿ ಸೈಯದಾ ಜಫರುಲ್ಲಾ C/o ಶ್ರೀ/ಶ್ರೀಮತಿ ಸೈಯದಾ ಶ್ರೀ/ಶ್ರೀಮತಿ ನಾಜಿಯಾ ಬಾನು C/o ಶ್ರೀ/ಶ್ರೀಮತಿ ಸೈಯದಾ (ಇಬ್ಬರೂ ವಾಸ:** ಜೈಲು ರಸ್ತೆ ಸೋಮನಕೊಪ್ಪ ಕೋಟೆ ಗಂಗೂರು, ಶಿವಮೊಗ್ಗ ಕೋಟೆ ಗಂಗೂರು, ಶಿವಮೊಗ್ಗ ಕರ್ನಾಟಕ, 577204)	ಸ್ಥಿರ ಆಸ್ತಿಯ ವಿವರ: ದಸ್ತಾವೇಜಿನ ಪ್ರಕಾರ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲೂಕು, ಸೋಮಿನಕೊಪ್ಪ ಗ್ರಾಮದ ವಾರ್ಡ್ ನಂ. 1 ರಲ್ಲಿರುವ ಆಸ್ತಿ; ಇದರ ಸಿ.ಎಂ.ಸಿ. ಖಾತಾ ಸಂಖ್ಯೆ 2093/2093/26 (ಹಳೆಯ ಗ್ರಾಮ ಪಂಚಾಯಿತಿ ಕ್ರಮ ಸಂಖ್ಯೆ 26), ಸಿ.ಎಂ.ಸಿ. ಖಾತಾ ಪಿ.ಐ.ಡಿ. ಸಂಖ್ಯೆ 127739 ಮತ್ತು ಆಸ್ತಿ ಸಂಖ್ಯೆ 2093-1/2093-1/26-1.	ರೂ.1502000 ರೂ.150200 ರೂ.10,000	26.11.2026 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	**ಸಾಲ ಖಾತೆ ಸಂಖ್ಯೆ:- SECHMGR0378043 / 200002454054 ಕ್ಲೈಮ್ ಬಾಕಿ ಇರುವ ಮೊತ್ತ** 12.08.2025 ರಂತೆ **ರೂ.480413/-** ಮತ್ತು 13.08.2025 ರಿಂದ ಹೆಚ್ಚಿನ ಬಡ್ಡಿಯೊಂದಿಗೆ ಮಾಸಿಕ ವಿಶ್ರಾಂತಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ, (08.10.2026 ರಂತೆ ಒಟ್ಟು ಬಾಕಿ ರೂ.691327/-)
	ಖರೀದಿ ಮತ್ತು ಮಾರಾಟದ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಪ್ರಶ್ನೆಗಳಿಗೆ ಸಂಪರ್ಕಿಸಿ: ಭಾನುಪ್ರಕಾಶ್ ಆರ್ 8050632345 , ದರ್ಶನ ಕೆ ಎಂ 9611143773				
2.	**ಶ್ರೀ/ಶ್ರೀಮತಿ ಮಂಜುನಾಥ ಸಿ ಸಿ C/o ಶ್ರೀ/ಶ್ರೀಮತಿ ರಾಮಚಂದ್ರೇಗೌಡ ಸಿ ಶ್ರೀ/ಶ್ರೀಮತಿ ಯಶೋದಾ C/o ಶ್ರೀ/ ಶ್ರೀಮತಿ ಮಾಸ್ತೇಗೌಡ (ಇಬ್ಬರೂ ವಾಸ:** ಚಿಕ್ಕಗೌಜ, ಹಿರೇಗೌಜ, ಚಿಕ್ಕಮಗಳೂರು, ಕರ್ನಾಟಕ, 577168)	ಖಾತಾ ಸಂಖ್ಯೆ 301/1, ಜಿ.ಪಿ. ಸಂಖ್ಯೆ 150900104700520111, ಚಿಕ್ಕಗೌಜ ಗ್ರಾಮ, ಹಿರೇಗೌಜ ಗ್ರಾಮ ಪಂಚಾಯಿತಿ, ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ (ಉತ್ತರಕ್ಕೆ) - ರಸ್ತೆ (ದಕ್ಷಿಣಕ್ಕೆ) - ರಸ್ತೆ (ಪೂರ್ವಕ್ಕೆ) - ಮಸ್ತೇಗೌಡರ ಮನೆ, (ಪಶ್ಚಿಮಕ್ಕೆ) - ರಂಗೇಗೌಡರ ಮನೆ.	ರೂ.619000 ರೂ.61900 ರೂ.10,000	26.11.2026 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	**ಸಾಲ ಖಾತೆ ಸಂಖ್ಯೆ:- SESIMGA0343387 / 200002010144 ಕ್ಲೈಮ್ ಬಾಕಿ ಇರುವ ಮೊತ್ತ** 20.05.2025 ರಂತೆ **ರೂ.678327/-** ಮತ್ತು 21.05.2025 ರಿಂದ ಹೆಚ್ಚಿನ ಬಡ್ಡಿಯೊಂದಿಗೆ ಮಾಸಿಕ ವಿಶ್ರಾಂತಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ, (08.10.2026 ರಂತೆ ಒಟ್ಟು ಬಾಕಿ ರೂ.1065784/-)
	ಖರೀದಿ ಮತ್ತು ಮಾರಾಟದ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಪ್ರಶ್ನೆಗಳಿಗೆ ಸಂಪರ್ಕಿಸಿ: ಸಂಗಮ ಹೆಚ್. S9686451317, ದರ್ಶನ ಕೆ ಎಂ 9611143773				
3.	**ಶ್ರೀ/ಶ್ರೀಮತಿ ಉದ್ದಯ್ಯ C/o ಶ್ರೀ/ ಶ್ರೀಮತಿ. ದಿವಂಗತ ಶ್ರೀ/ಶ್ರೀಮತಿ ಶಿಲ್ಪಾ C/o ಶ್ರೀ/ಶ್ರೀಮತಿ ಚಂದ್ರಯ್ಯ (ಇಬ್ಬರೂ ವಾಸ:** ಬಾಳೆಹಳ್ಳಿ ಹಂಡಿ, ಚಿಕ್ಕಮಗಳೂರು, ಹಂಡಿ, ಚಿಕ್ಕಮಗಳೂರು, ಕರ್ನಾಟಕ, 577111)	ಆಸ್ತಿ ಸಂಖ್ಯೆ 8/8. ಪಿ.ಐ.ಡಿ. ಸಂಖ್ಯೆ 150900101500200014, ಚಿಕ್ಕಮಗಳೂರು ತಾಲೂಕು ಮತ್ತು ಜಿಲ್ಲೆ ಕೆಳಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೇಳೆಹಳ್ಳಿ ಗ್ರಾಮದಲ್ಲಿ ನೆಲೆಗೊಂಡಿದೆ. (ಉತ್ತರಕ್ಕೆ) - ಚೌಡಯ್ಯನವರ ಮನೆ, (ದಕ್ಷಿಣಕ್ಕೆ) - ಬೈರಯ್ಯನವರ ಮನೆ, (ಪೂರ್ವಕ್ಕೆ) - ಟಿ.ಡಿ.ಬಿ. ರಸ್ತೆ (ಪಶ್ಚಿಮಕ್ಕೆ) - ಖಾಲಿ ನಿವೇಶನ.	ರೂ.865000 ರೂ.86500 ರೂ.10,000	26.11.2026 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	**ಸಾಲ ಖಾತೆ ಸಂಖ್ಯೆ:- SECHMGR0387253 / 200002174895 ಕ್ಲೈಮ್ ಬಾಕಿ ಇರುವ ಮೊತ್ತ** 14.07.2025 ರಂತೆ **ರೂ.585319/-** ಮತ್ತು 15.07.2025 ರಿಂದ ಹೆಚ್ಚಿನ ಬಡ್ಡಿಯೊಂದಿಗೆ ಮಾಸಿಕ ವಿಶ್ರಾಂತಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ, (08.10.2026 ರಂತೆ ಒಟ್ಟು ಬಾಕಿ ರೂ.902983/-)
	ಖರೀದಿ ಮತ್ತು ಮಾರಾಟದ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಪ್ರಶ್ನೆಗಳಿಗೆ ಸಂಪರ್ಕಿಸಿ: ಸಂಗಮ ಹೆಚ್. S9686451317, ದರ್ಶನ ಕೆ ಎಂ 9611143773				
4.	**ಶ್ರೀ/ಶ್ರೀಮತಿ ರವೂಫ್ ಎಸ್ C/o ಶ್ರೀ/ ಶ್ರೀಮತಿ ಸುಲೈಮಾನ್ ಕೆ ಶ್ರೀ/ಶ್ರೀಮತಿ ಜುಬೇದಾ C/o ಶ್ರೀ/ ಶ್ರೀಮತಿ ಸುಲೇಮಾನ್ (ಇಬ್ಬರೂ ವಾಸ:** ಗಾಳಿಪೂಜೆ ಮಲ್ಲೇನಹಳ್ಳಿ ಚಿಕ್ಕಮಗಳೂರು, ಕರ್ನಾಟಕ, 577131)	ಆರ್‌ಡಿಪಿಆರ್ ಸಂಖ್ಯೆ: 150900101801000139. ಆಸ್ತಿ ಸಂಖ್ಯೆ: 981. ಸ್ಥಳ: ಗಲಿಪೂಜೆ ಗ್ರಾಮ, ತೊಗರಿಹಂಕಲ್ ಗ್ರಾಮ ಪಂಚಾಯಿತಿ, ಚಿಕ್ಕಮಗಳೂರು ತಾಲೂಕು ಮತ್ತು ಜಿಲ್ಲೆ, (ಉತ್ತರಕ್ಕೆ) - ರಸ್ತೆ (ದಕ್ಷಿಣಕ್ಕೆ) - ರಸ್ತೆ (ಪೂರ್ವಕ್ಕೆ) - ಖಾಲಿ ಜಾಗ, (ಪಶ್ಚಿಮಕ್ಕೆ) - ರಾಮಾಯಿ ಅವರ ಮನೆ.	ರೂ.1014000 ರೂ.101400 ರೂ.10,000	26.11.2026 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	**ಸಾಲ ಖಾತೆ ಸಂಖ್ಯೆ:- SECHMGR0429240 / 200002018940 ಕ್ಲೈಮ್ ಬಾಕಿ ಇರುವ ಮೊತ್ತ** 14.07.2025 ರಂತೆ **ರೂ.827281/-** ಮತ್ತು 15.07.2025 ರಿಂದ ಹೆಚ್ಚಿನ ಬಡ್ಡಿಯೊಂದಿಗೆ ಮಾಸಿಕ ವಿಶ್ರಾಂತಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ, (08.10.2026 ರಂತೆ ಒಟ್ಟು ಬಾಕಿ ರೂ.1083930/-)
	ಖರೀದಿ ಮತ್ತು ಮಾರಾಟದ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಪ್ರಶ್ನೆಗಳಿಗೆ ಸಂಪರ್ಕಿಸಿ: ಸಂಗಮ ಹೆಚ್. S9686451317, ದರ್ಶನ ಕೆ ಎಂ 9611143773				
5.	**ಶ್ರೀ/ಶ್ರೀಮತಿ ಕೊರಗಪ್ಪ ಎಸ್ C/o ಶ್ರೀ/ ಶ್ರೀಮತಿ ಶಿವಪ್ಪ ಶ್ರೀ/ಶ್ರೀಮತಿ ಪವಿತ್ರಾ C/o ಶ್ರೀ/ ಶ್ರೀಮತಿ ಶಾಂತಾ (ಇಬ್ಬರೂ ವಾಸ:** ಗುಡ್ಡೇನಹಳ್ಳಿ ಹೊಸಪೇಟೆ ತೊಗರಿಹಂಕಲ್, ಚಿಕ್ಕಮಗಳೂರು, ಕರ್ನಾಟಕ, 577137)	ಆಸ್ತಿ ಸಂಖ್ಯೆ155, ಆರ್‌ಡಿಪಿಆರ್ ನಂ. 150900101801120049, ತೊಗ್ರಿಹಂಕಲ್ ಗ್ರಾಮ ಮತ್ತು ಗ್ರಾಮ ಪಂಚಾಯತ್, ಚಿಕ್ಕಮಗಳೂರು ತಾಲೂಕು ಮತ್ತು ಜಿಲ್ಲೆ, (ಉತ್ತರದಿಂದ)- ರಾಜು ಶೆಟ್ಟಿ ಮನೆ (ದಕ್ಷಿಣದಿಂದ)- ಬಾಬುಸಾಹೇಬ್ ಮನೆ (ಪೂರ್ವದ ಮೂಲಕ)- ರಸ್ತೆ (ಪಶ್ಚಿಮದಿಂದ)- ಜನಾರ್ದನ ಪೂಜಾರಿ ಮನೆ	ರೂ.1280000 ರೂ.128000 ರೂ.10,000	26.11.2026 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	**ಸಾಲ ಖಾತೆ ಸಂಖ್ಯೆ:- SECHMGR0439250 / 200002148888 ಕ್ಲೈಮ್ ಬಾಕಿ ಇರುವ ಮೊತ್ತ** 12.08.2025 ರಂತೆ **ರೂ.916770/-** ಮತ್ತು 13.08.2025 ರಿಂದ ಹೆಚ್ಚಿನ ಬಡ್ಡಿಯೊಂದಿಗೆ ಮಾಸಿಕ ವಿಶ್ರಾಂತಿ, ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ, (08.10.2026 ರಂತೆ ಒಟ್ಟು ಬಾಕಿ ರೂ.1207695/-)
	ಖರೀದಿ ಮತ್ತು ಮಾರಾಟದ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಪ್ರಶ್ನೆಗಳಿಗೆ ಸಂಪರ್ಕಿಸಿ: ಸಂಗಮ ಹೆಚ್. S9686451317, ದರ್ಶನ ಕೆ ಎಂ 9611143773				

ಖರೀದಿದಾರರು/ಬಿಡ್ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಮೊತ್ತವನ್ನು NEFT/RTGS/DD ಮೂಲಕ "ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್" ಖಾತೆ ಸಂಖ್ಯೆ- 200000807725 ಮತ್ತು IFSC ಕೋಡ್- ESFB0001001 ಭಾಗ್ಯಂ ಗಲೇರಿಯಾ ಹೊಸ ಸಂಖ್ಯೆ 18, ಬಜುಲ್ಲಾ ರಸ್ತೆ, ಟಿ-ನಗರ, ಚೆನ್ನೈ-600 117 ಖಾತೆಗೆ ಸಲ್ಲಿಸಬೇಕಾಗುತ್ತದೆ. **ದಿನಾಂಕ: 25.11.2026** ರಂದು ಅಥವಾ ಅದಕ್ಕೂ ಮೊದಲು ಯಾವುದೇ ರಾಷ್ಟ್ರೀಕೃತ ಅಥವಾ ನಿಗದಿತ ಬ್ಯಾಂಕಿನಿಂದ ಡ್ರಾ ಮಾಡಲಾಗಿದೆ.
ಇ-ಹರಾಜಿನ ನಿಯಮಗಳು ಮತ್ತು ಷರತ್ತುಗಳ ವಿವರಗಳಿಗಾಗಿ ದಯವಿಟ್ಟು www.equitas.bank.in & https://www.bankeauctions.com ನಲ್ಲಿ ಒದಗಿಸಲಾದ ಲಿಂಕ್ ಅನ್ನು ನೋಡಿ.

ದಿನಾಂಕ: 20.10.2026, ಸ್ಥಳ: ಶಿವಮೊಗ್ಗ **ಅಧಿಕೃತ ಅಧಿಕಾರಿ, ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**

ಚಳ್ಳಕೆರೆ ಅಪರ ಸಿವಿಲ್ ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯದಲ್ಲಿ ಚಳ್ಳಕೆರೆ.

ಸಿ.ಆರ್.ಮಿಸ್. ನಂ. 831/2026

ಅರ್ಜಿದಾರರು : 1) ಸುರೇಶ ಬಿನ್ ಲೇಟ್ ಸೂರಯ್ಯ, ಸು. 55 ವರ್ಷ, 2) ಸುನಂದಮ್ಮ ಕೋಂ ಪಾಲಯ್ಯ, ಸು. 57 ವರ್ಷ, ಅರ್ಜಿದಾರ 1 ಮತ್ತು 2ನೆಯವರ ವಾಸ ಜಾಗನೋರಹಟ್ಟಿ ಗ್ರಾಮ, ನಾಯಕನಹಟ್ಟಿ ಹೋ, ಚಳ್ಳಕೆರೆ ತಾ. ಚಿತ್ರದುರ್ಗ ಜಿ. 3) ಶಾರದಮ್ಮ ಕೋಂ ಬೊಮ್ಮಯ್ಯ, ಸು. 53 ವರ್ಷ, ಹಿರೇಹಳ್ಳಿ ಗ್ರಾಮ, ತಳಕು ಹೋ. ಚಳ್ಳಕೆರೆ ತಾ. ಚಿತ್ರದುರ್ಗ ಜಿ.

ವಿರುದ್ಧ

ಎದುರುದಾರರು : 1) ಮುಖ್ಯಾಧಿಕಾ–ರಿಗಳು, ಜನನ ಮರಣ ನೋಂದಣಾಧಿಕಾ–ರಿಗಳವರು, ಪಟ್ಟಣ ಪಂಚಾಯಿತಿ, ನಾಯಕನಹಟ್ಟಿ ಪಟ್ಟಣ, ಚಳ್ಳಕೆರೆ ತಾಲ್ಲೂಕು.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಘನಸನ್ನಿಧಿಯ ನ್ಯಾಯಾಲಯದಲ್ಲಿ **1 ರಿಂದ 3ನೇ ಅರ್ಜಿದಾರರ ತಾಯಿಯಾದ ಮೃತ ಮಲ್ಲಮ್ಮ ಕೋಂ ಲೇಟ್ ಸೂರಯ್ಯ ಇವರು ದಿನಾಂಕ 26–06–2017ರಂದು ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು, ನಾಯಕನಹಟ್ಟಿ ಹೋ. ಜಾಗನೋರಹಟ್ಟಿ ಗ್ರಾಮದಲ್ಲಿರುವ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ.** ಸದರಿಯವರು ಮರಣ ಹೊಂದಿದ ಬಗ್ಗೆ ಮರಣದ ಸಮರ್ಥನಾ ಪತ್ರವನ್ನು ಪಡೆಯುವ ಸಲುವಾಗಿ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರನ್ನು ಹೊರತುಪಡಿಸಿ ಇನ್ನು ಯಾರೇ ಅಗಲಿ ಮೃತರ ವಾರಸುದಾರರು ಇದ್ದಲ್ಲಿ **ದಿ : 30–11–2026** ರಂದು ಬೆಳಿಗ್ಗೆ 11 ಗಂಟೆಗೆ ಖುದ್ದು ಅಥವಾ ವಕೀಲರ ಮೂಲಕವಾಗಲಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಗೈರು ಹಾಜರಾದಲ್ಲಿ ಏಕಪಕ್ಷೀಯಾಗಿ ಈ ಪ್ರಕರಣವನ್ನು ತೀರ್ಮಾನಿಸಲಾಗುವುದು.

ದಿನಾಂಕ 14–10–2026 ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

ಘನ ನ್ಯಾಯಾಲಯದ ಆದೇಶದ ಮೇರೆಗೆ

ದಿನಾಂಕ : 13–10–2026
ಸ್ಥಳ : ಚಳ್ಳಕೆರೆ.
ಸಹಿ.
ಬಿ.ಪಾಲಯ್ಯ
ಅರ್ಜಿದಾರರ ಪರ ವಕೀಲರು ಚಳ್ಳಕೆರೆ.

ಸಹಿ.
ಶಿರಸ್ತೆದಾರರು, ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, ಚಳ್ಳಕೆರೆ.

ಚಳ್ಳಕೆರೆ ಪ್ರಧಾನ ಸಿವಿಲ್ ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯದಲ್ಲಿ ಚಳ್ಳಕೆರೆ.

ಸಿ.ಆರ್.ಮಿಸ್. ನಂ. 889/2026

ಅರ್ಜಿದಾರರು : 1) ಸಿ.ವಿ.ಶ್ರೀನಿವಾಸಗುಪ್ತ ಬಿನ್ ಲೇಟ್ ಸಿ.ವಿ.ವೆಂಕಟಚಲಪಯ್ಯ, ಸು. 67 ವರ್ಷ, 2) ಸುಶೀಲಮ್ಮ ಬಿನ್ ಲೇಟ್ ಸಿ.ವಿ.ವೆಂಕಟಚಲಪಯ್ಯ, ಸು. 65 ವರ್ಷ, 3) ವಿಮಲ ಬಿನ್ ಸಿ.ವಿ.ವೆಂಕಟಚಲಪಯ್ಯ, ಸು. 63 ವರ್ಷ, 4) ಸಿ.ನಾಗಲಕ್ಷ್ಮಮ್ಮ ಕೋಂ ಲೇಟ್ ಸಿ.ವಿ. ಶೇಷಚಲಂ ಸು. 70 ವರ್ಷ, 5) ಸಿ.ಎ.ಅನಂತನಾಗು ಬಿನ್ ಲೇಟ್ ಸಿ.ವಿ.ಅರಣಾಚಲಂ, ಸು. 41 6) ಸಿ.ಎ.ಮೋಹನ್‌ಕೃಷ್ಣ ಬಿನ್ ಲೇಟ್ ಸಿ.ವಿ.ಅರುಣಾಚಲಂ, ಸು. 38 ವರ್ಷ, 7) ಸಿ.ಎ.ದಿವ್ಯಭಾರತಿ ಬಿನ್ ಲೇಟ್ ಅರುಣಾಚಲಂ, ಸು. 32 ವರ್ಷ, ಎಲ್ಲರ ವಾಸ, ಗಾಂಧಿನಗರ, ಚಳ್ಳಕೆರೆ ಟೌನ್, ಚಳ್ಳಕೆರೆ ತಾ. ಚಿತ್ರದುರ್ಗ ಜಿ.

ವಿರುದ್ಧ

ಎದುರುದಾರರು : 1) ಪೌರಾಯುಕ್ತರು, ಜನನ ಮರಣ ನೋಂದಣಾಧಿಕಾ–ರಿಗಳವರು, ನಗರಸಭೆ, ಚಳ್ಳಕೆರೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಘನಸನ್ನಿಧಿಯ ನ್ಯಾಯಾಲಯದಲ್ಲಿ **1 ರಿಂದ 3ನೇ ಅರ್ಜಿದಾರರ ತಾಯಿ ಮತ್ತು 4ನೇ ಅರ್ಜಿದಾರರ ಅತ್ತೆ ಹಾಗೂ 5 ರಿಂದ 7ನೇ ಅರ್ಜಿದಾರರ ಅಜ್ಜಿಯಾದ ಮೃತ ಸಿ.ವಿ.ವರಲಕ್ಷ್ಮಮ್ಮ ಕೋಂ ಲೇಟ್ ಸಿ.ವಿ.ವೆಂಕಟಾಚಲಪತಯ್ಯ ಇವರು ದಿನಾಂಕ 16–12–1996 ರಂದು ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು, ಚಳ್ಳಕೆರೆ ಟೌನ್ ಗಾಂಧಿನಗರದಲ್ಲಿರುವ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ.** ಸದ–ರಿಯವರು ಮರಣ ಹೊಂದಿದ ಬಗ್ಗೆ ಮರಣದ ಸಮರ್ಥನಾ ಪತ್ರವನ್ನು ಪಡೆಯುವ ಸಲುವಾಗಿ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರನ್ನು ಹೊರತುಪಡಿಸಿ ಇನ್ನು ಯಾರೇ ಅಗಲಿ ಮೃತರ ವಾರಸುದಾರರು ಇದ್ದಲ್ಲಿ **ದಿ : 30–11–2026** ರಂದು ಬೆಳಿಗ್ಗೆ 11 ಗಂಟೆಗೆ ಖುದ್ದು ಅಥವಾ ವಕೀಲರ ಮೂಲಕವಾಗಲಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಗೈರು ಹಾಜರಾದಲ್ಲಿ ಏಕಪಕ್ಷೀಯಾಗಿ ಈ ಪ್ರಕರಣವನ್ನು ತೀರ್ಮಾನಿಸಲಾಗುವುದು.

ದಿನಾಂಕ 17–10–2026 ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

ಘನ ನ್ಯಾಯಾಲಯದ ಆದೇಶದ ಮೇರೆಗೆ

ದಿನಾಂಕ : 13–10–2026
ಸ್ಥಳ : ಚಳ್ಳಕೆರೆ.
ಸಹಿ.
ಎಂ.ವಿ.ಶಿವಾನಂದ
ಅರ್ಜಿದಾರರ ಪರ ವಕೀಲರು ಚಳ್ಳಕೆರೆ.

ಸಹಿ.
ಶಿರಸ್ತೆದಾರರು, ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, ಚಳ್ಳಕೆರೆ.

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

IDFC FIRST Bank

(ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದಾಗಿದೆ) CIN: l65110tn2014plc097792, ನೋಂದಾಯಿತ ಕಚೇರಿ : ಕೆಆರ್‌ಎಂ ಟವರ್, 8 ನೇ ಮಹಡಿ ಹ್ಯಾರಿಂಗ್ಟನ್ ರಸ್ತೆ, ಚೆಟ್‌ಪೆಟ್, ಚೆನ್ನೈ–600031. ದೂ: + 9144 4564 4000 ಫ್ಯಾಕ್ಸ್ : +91 444564 4022

ಸೆಕ್ಷನ್ 13 (2) ರ ಸೆಕ್ಯುರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ, 2002 ರ ಅಡಿಯಲ್ಲಿ ಸೂಚನೆ.

ಈ ಕೆಳಗಿನ ಸಾಲಗಾರರು ಮತ್ತು ಸಹ–ಸಾಲಗಾರರು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿದೆ) ನಿಂದ ಕೆಳಗೆ ತಿಳಿಸಲಾದ ಭದ್ರತಾ ಸಾಲಗಳನ್ನು ಪಡೆದುಕೊಂಡಿದ್ದಾರೆ. ಕೆಳಗೆ ತಿಳಿಸಲಾದ ಸಾಲಗಾರರ ಮತ್ತು ಸಹ–ಸಾಲಗಾರರ ಸಾಲಗಳಿಗಾಗಿ ಅವರ ಈ ಕೆಳಗಿನ ಆಸ್ತಿಗಳ ಅಡಮಾನ ಮಾಡಿದ್ದು, ಅವರು ಆಯಾ ಸಾಲ ಒಪ್ಪಂದಗಳ ನಿಯಮಗಳು ಮತ್ತು ಷರತ್ತುಗಳನ್ನು ಪಾಲಿಸಲು ವಿಫಲರಾಗಿರುವುದರಿಂದ ಮತ್ತು ಅನಿಯಮಿತವಾಗಿರುವುದರಿಂದ, ಅವರ ಸಾಲವನ್ನು ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ ಎನ್‌ಪಿಎ ಎಂದು ವರ್ಗೀಕರಿಸಲಾಗಿದೆ. ಅವರು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿದೆ) ಗೆ ಪಾವತಿಸಬೇಕಾದ ಮೊತ್ತವನ್ನು, ಈ ಕೆಳಗಿನ ಕೋಷ್ಟಕದಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಸಂಬಂಧಿತ ಸೂಚನೆಗಳ ಪ್ರಕಾರ ಉಲ್ಲೇಖಿಸಲಾಗಿದೆ ಮತ್ತು ಹೇಳಲಾದ ಮೊತ್ತಗಳ ಮೇಲಿನ ಹೆಚ್ಚಿನ ಬಡ್ಡಿಯೂ ಸಹ ಅನ್ವಯಿಸುತ್ತದೆ ಮತ್ತು ಅವರ ಆಯಾ ದಿನಾಂಕಗಳಿಂದ ಜಾರಿಗೆ ಬರುವ ಒಪ್ಪಂದದ ದರದ ಪ್ರಕಾರ ಅದನ್ನು ವಿಧಿಸಲಾಗುತ್ತದೆ.

ಕ್ರ ಸಂ.	ಸಾಲದ ಖಾತಾ ಸಂ.	ಸಾಲದ ವರ್ಗ	ಸಾಲಗಾರರ ಮತ್ತು ಸಹ–ಸಾಲಗಾರರ ಹೆಸರು	ಸೆಕ್ಷನ್ 13(2) ಸೂಚನೆ ದಿನಾಂಕ	ಸೆಕ್ಷನ್ 13(2) ಸೂಚನೆಯಂತೆ ಬಾಕಿ ಮೊತ್ತ
1	68850286	ಆಸ್ತಿ ಮೇಲೆ ಸಾಲ	1. ರಮೇಶ ಎಚ್.ಡಿ. 2. ಶ್ರುತಿ ಎಚ್.ಎಸ್.	07.09.2026	INR 5,24,533.19/-
	ಆಸ್ತಿ ವಿಳಾಸ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಇ–ಸ್ವತ್ತು ಸಂ. 150900201900120039, ಆಸ್ತಿ ಸಂ. 2, ಪೂರ್ವ–ಪಶ್ಚಿಮ 9.144 ಮೀಟರ್, ಉತ್ತರ–ದಕ್ಷಿಣ 12.192 ಮೀಟರ್ = ಒಟ್ಟು 111.48 ಚ.ಮೀ. ವಿಸ್ತೀರ್ಣದ ನಿವೇಶನ ಹಾಗೂ ಅದರ ಮೇಲಿರುವ 72.46 ಚ.ಮೀ. ಮನೆಯ ಸಂಪೂರ್ಣ ಆಸ್ತಿ. ಗ್ರಾಮ: ಹರಳಘಟ್ಟ, ಗ್ರಾಮ ಪಂಚಾಯತಿ: ಹರಳಘಟ್ಟ, ಬ್ಲಾಕ್: ಕಡೂರು, ಜಿಲ್ಲೆ: ಚಿಕ್ಕಮಗಳೂರು, ಕರ್ನಾಟಕ–577548 ಇಲ್ಲಿದ್ದು, ಚಕ್ಕುಬಂದಿ : ಪೂರ್ವ: ನಿವೇಶನ ಸಂ. 3, ಪಶ್ಚಿಮ: ನಿವೇಶನ ಸಂ. 1, ಉತ್ತರ: ರಸ್ತೆ, ದಕ್ಷಿಣ: ಖಾಲಿ ಜಮೀನ				
2	88459569	ಆಸ್ತಿ ಮೇಲೆ ಸಾಲ	1. ಪ್ರವೀಣ್ ಕುಮಾರ ಹೆಚ್ 2. ರುದ್ರಮ್ಮ ಹೆಚ್	16.09.2026	INR 6,52,185.12/-
	ಆಸ್ತಿ ವಿಳಾಸ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿ ಸಂ. 99, ಖಾತಾ ಕ್ರಸಂ. 159, ಪಿಐಡಿ ಸಂ. 151200502300200154, ಪೂರ್ವ–ಪಶ್ಚಿಮ 7.239 ಮೀಟರ್ × ಉತ್ತರ–ದಕ್ಷಿಣ 12.8016 ಮೀಟರ್ = 92.67 ಚ.ಮೀ., ಕಟ್ಟಡ ವಿಸ್ತೀರ್ಣ 92.67 ಚ.ಮೀ. ಇರುವ ಸಂಪೂರ್ಣ ಆಸ್ತಿ. ಬೆಲಿಮಲ್ಲೂರು ಗ್ರಾಮ, ಗ್ರಾಮ ಪಂಚಾಯತಿ: ಬೆಲಿಮಲ್ಲೂರು, ತಾಲ್ಲೂಕು: ಹೊನ್ನಾಳಿ, ಜಿಲ್ಲೆ: ದಾವಣಗೆರೆ, ಕರ್ನಾಟಕ–577217 ಇಲ್ಲಿದ್ದು, ಚಕ್ಕುಬಂದಿ : ಪೂರ್ವ: ಮಂಜಪ ರ ಆಸ್ತಿ, ಪಶ್ಚಿಮ: ಹನುಮಮ್ಮರ ಆಸ್ತಿ, ಉತ್ತರ: ಸಿದ್ದಪ್ಪರ ಆಸ್ತಿ, ದಕ್ಷಿಣ: ರಸ್ತೆ.				
3	103433890	ಆಸ್ತಿ ಮೇಲೆ ಸಾಲ	1. ರವಿಕಿರಣ ಕೆ. 2. ವಿಶಾಲಾಕ್ಷಮ್ಮ ಎಂ.	30.09.2026	INR 6,73,569.74/-
	ಆಸ್ತಿ ವಿಳಾಸ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿ ಸಂ. 17, ಸರ್ವೆ ಕ್ರಸಂ. 21, ಇ–ಸ್ವತ್ತು ಸಂ. 151200504200100349, ಪೂರ್ವ–ಪಶ್ಚಿಮ 7.9248 ಮೀಟರ್, ಉತ್ತರ–ದಕ್ಷಿಣ 9.144 ಮೀಟರ್ = 72.46 ಚ.ಮೀ., ಕಟ್ಟಡ ವಿಸ್ತೀರ್ಣ 52.95 ಚ.ಮೀ. ಇರುವ ಸಂಪೂರ್ಣ ಆಸ್ತಿ. ಕುರುವ ಹಳ್ಳಿದಿಬ್ಬ ಗ್ರಾಮ, ಗೋವಿನಕೋವಿ ಗ್ರಾಮ ಪಂಚಾಯತಿ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ, ಕರ್ನಾಟಕ–577230 ಇಲ್ಲಿದ್ದು, ಚಕ್ಕುಬಂದಿ : ಪೂರ್ವ: ಚಿಕ್ಕಪ್ಪನ ಆಸ್ತಿ, ಪಶ್ಚಿಮ: ರಸ್ತೆ, ಉತ್ತರ: ರಸ್ತೆ, ದಕ್ಷಿಣ: ಗ್ರಾಮ ಪಂಚಾಯತಿ ಖಾಲಿ ನಿವೇಶನ.				
4	105018187	ಗೃಹ ಸಾಲ	1. ಚಂದ್ರಪ್ಪ ಹೆಚ್ 2. ಶಿವಮ್ಮ ಹೆಚ್	16.09.2026	INR 9,82,597.39/-
	ಆಸ್ತಿ ವಿಳಾಸ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಇ–ಸ್ವತ್ತು ಸಂ. 152400100800400181, ಆಸ್ತಿ ಸಂ. 126/1, ಪೂರ್ವ–ಪಶ್ಚಿಮ 4.8768 ಮೀಟರ್, ಉತ್ತರ–ದಕ್ಷಿಣ 18.288 ಮೀಟರ್ = 89.19 ಚ.ಮೀ., ಕಟ್ಟಡ ವಿಸ್ತೀರ್ಣ 89.19 ಚ.ಮೀ. ಇರುವ ಸಂಪೂರ್ಣ ಆಸ್ತಿ. ಸೈದರಕಲ್ಲಹಳ್ಳಿ ಗ್ರಾಮ, ಸೈದರಕಲ್ಲಹಳ್ಳಿ ಗ್ರಾಮ ಪಂಚಾಯತಿ, ತಾಲ್ಲೂಕು: ಭದ್ರಾವತಿ, ಜಿಲ್ಲೆ: ಶಿವಮೊಗ್ಗ, ಕರ್ನಾಟಕ–577243 ಇಲ್ಲಿದ್ದು, ಚಕ್ಕುಬಂದಿ : ಪೂರ್ವ: ರಂಗಪ್ಪನ ಆಸ್ತಿ, ಪಶ್ಚಿಮ: ಸಬೀನಾ ಬಾನು ಅವರ ಆಸ್ತಿ, ಉತ್ತರ: ಬಸವರಾಜಪ್ಪನ ಆಸ್ತಿ, ದಕ್ಷಿಣ: ರಸ್ತೆ.				
5	112116727	ಆಸ್ತಿ ಮೇಲೆ ಸಾಲ	1. ರಘು ಎಸ್. 2. ಶೇಖರಪ್ಪ ಬಿ.	23.09.2026	INR 11,43,957.32/-
	ಆಸ್ತಿ ವಿಳಾಸ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿ ಸಂ. 309, ಇ–ಸ್ವತ್ತು ಸಂ. 151200500900220254, ಪೂರ್ವ–ಪಶ್ಚಿಮ 9.144 ಮೀಟರ್ × ಉತ್ತರ–ದಕ್ಷಿಣ 15.24 ಮೀಟರ್ = 139.35 ಚ.ಮೀ., ಕಟ್ಟಡ ವಿಸ್ತೀರ್ಣ 139.35 ಚ.ಮೀ. ಇರುವ ಸಂಪೂರ್ಣ ಆಸ್ತಿ. ನೆಲಹೊನ್ನೆ ಗ್ರಾಮ, ಕುಂಬಳೂರು ಗ್ರಾಮ ಪಂಚಾಯತಿ, ತಾಲ್ಲೂಕು: ಹೊನ್ನಾಳಿ, ಜಿಲ್ಲೆ: ದಾವಣಗೆರೆ, ಕರ್ನಾಟಕ–577219 ಇಲ್ಲಿದ್ದು, ಚಕ್ಕುಬಂದಿ : ಪೂರ್ವ: ಸಿದ್ದಪ್ಪನ ಪತ್ನಿ ಕರಿಯಮ್ಮನ ಆಸ್ತಿ, ಪಶ್ಚಿಮ: ಸಿದ್ದಪ್ಪನ ಮಗ ಚನ್ನಬಸಪ್ಪನ ಆಸ್ತಿ, ಉತ್ತರ: ಗ್ರಾಮ ಪಂಚಾಯತಿ ರಸ್ತೆ, ದಕ್ಷಿಣ: ನೀಲಮ್ಮನ ಆಸ್ತಿ.				
6	117595800	ಆಸ್ತಿ ಮೇಲೆ ಸಾಲ	1. ರಾಧಾ ಎಂ. 2. ಎಲ್. ರಂಗನಾಥ	19.09.2026	INR 7,62,617.21/-
	ಆಸ್ತಿ ವಿಳಾಸ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿ ಸಂ. 115/1, ಇ–ಸ್ವತ್ತು ಸಂ. 151200504300400192, ವಿಸ್ತೀರ್ಣ: 5.4864 ಮೀ × 10.668 ಮೀ = 58.53 ಚ.ಮೀ., ಕಟ್ಟಡ ವಿಸ್ತೀರ್ಣ 58.00 ಚ.ಮೀ. ಇರುವ ಸಂಪೂರ್ಣ ಆಸ್ತಿ. ಬಾಳಮೂರಿ ಗ್ರಾಮ, ಎಚ್. ಗೋಪಗೊಂಡನಹಳ್ಳಿ ಗ್ರಾಮ ಪಂಚಾಯತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, ಕರ್ನಾಟಕ ಇಲ್ಲಿದ್ದು, ಚಕ್ಕುಬಂದಿ : ಪೂರ್ವ: ಗ್ರಾಮ ಪಂಚಾಯತಿ ರಸ್ತೆ, ಪಶ್ಚಿಮ: ವಾಲ್ಮೀಕಿ ಸಮುದಾಯ ಭವನ ಕಟ್ಟಡ, ಉತ್ತರ: ಲೋಕಪ್ಪ ಬಿನ್ ಚನ್ನಪ್ಪ ಬೆನಕಪ್ಪ ಬಿನ್ ಭೀಮಪ್ಪ, ಮತ್ತು ಚನ್ನಪ್ಪ ಬಿನ್ ಭೀಮಪ್ಪ ಅವರ ಆಸ್ತಿ, ದಕ್ಷಿಣ: ನರಸಿಂಹಪ್ಪ ಬಿನ್ ಅಜ್ಜಮ್ಮ ಅವರ ಆಸ್ತಿ.				
7	122122609	ಆಸ್ತಿ ಮೇಲೆ ಸಾಲ	1. ಸುರೇಂದ್ರ ಎ.ಕೆ. 2. ಮಂಜುಳಾ ಬಿ.	30.09.2026	INR 7,90,036.74/-
	ಆಸ್ತಿ ವಿಳಾಸ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿ ಸಂ. 151, ಇ–ಸ್ವತ್ತು ಸಂ. 151200501800300172, ಪೂರ್ವ–ಪಶ್ಚಿಮ 12.192 ಮೀಟರ್ × ಉತ್ತರ–ದಕ್ಷಿಣ 21.336 ಮೀಟರ್ = 260.13 ಚ.ಮೀ., ಕಟ್ಟಡ ವಿಸ್ತೀರ್ಣ 104.52 ಚ.ಮೀ. ಇರುವ ಸಂಪೂರ್ಣ ಆಸ್ತಿ. ರಾಂಪುರ ಗ್ರಾಮ, ರಾಂಪುರ ಗ್ರಾಮ ಪಂಚಾಯತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, ಕರ್ನಾಟಕ–577224. ಚತುಸ್ಸೀಮೆ: ಪೂರ್ವ: ಹಾಲಶಂಕರಪ್ಪನ ಮನೆ, ಪಶ್ಚಿಮ: ಹಾಲಶಂಕರಪ್ಪನ ಮನೆ, ಉತ್ತರ: ರಸ್ತೆ, ದಕ್ಷಿಣ: ಹನುಮಮ್ಮನ ಆಸ್ತಿ.				
8	134553395	ಗೃಹ ಸಾಲ	1. ಆರ್. ನಿಂಗರಾಜು 2. ಪುಷ್ಪಾ ಎನ್.	30.09.2026	INR 14,62,623.61/-
	ಆಸ್ತಿ ವಿಳಾಸ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿ ಸಂ. 536/11, ಇ–ಸ್ವತ್ತು ಸಂ. 151200300900220213, ಪೂರ್ವ–ಪಶ್ಚಿಮ 5.6452 ಮೀಟರ್ × ಉತ್ತರ–ದಕ್ಷಿಣ 17.92224 ಮೀಟರ್ = 101.17 ಚ.ಮೀ. ಇರುವ ಸಂಪೂರ್ಣ ಆಸ್ತಿ. ಜಿಗಳಿ ಗ್ರಾಮ, ಜಿಗಳಿ ಗ್ರಾಮ ಪಂಚಾಯತಿ, ತಾಲ್ಲೂಕು: ಹರಿಹರ, ಜಿಲ್ಲೆ: ದಾವಣಗೆರೆ, ಕರ್ನಾಟಕ–577530 ಇಲ್ಲಿದ್ದು, ಚಕ್ಕುಬಂದಿ : ಪೂರ್ವ: ನಿವೇಶನ ಸಂ. 536/12, ಪಶ್ಚಿಮ: ನಿವೇಶನ ಸಂ. 536/10, ಉತ್ತರ: ದಿಲ್ಲಿಯಪ್ಪನ ಪತ್ನಿ ಗಡ್ಡಿಗೆಮ್ಮನ ಆಸ್ತಿ, ದಕ್ಷಿಣ: 15 ಅಡಿ ರಸ್ತೆ.				
9	137682075	ಆಸ್ತಿ ಮೇಲೆ ಸಾಲ	1. ಅಂಬಿಕಾ ಎಸ್. 2. ಶಿವಶಂಕರ್ ಜಿ.	07.10.2026	INR 8,29,859.78/-
	ಆಸ್ತಿ ವಿಳಾಸ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಇ–ಸ್ವತ್ತು ಸಂ. 150900701700400259, ಆಸ್ತಿ ಸಂ. 259, ವಿಸ್ತೀರ್ಣ 7.62 ಮೀ × 12.192 ಮೀ = 92.90 ಚ.ಮೀ. ನಿವೇಶನ ಹಾಗೂ ಅದರ ಮೇಲಿರುವ 92.90 ಚ.ಮೀ. ಮನೆಯ ಸಂಪೂರ್ಣ ಆಸ್ತಿ. ಚಿಕ್ಕನವಂಗಲ ಗ್ರಾಮ, ಚಿಕ್ಕನವಂಗಲ ಗ್ರಾಮ ಪಂಚಾಯತಿ, ಶಿವನಿ ಹೋಬಳಿ, ಅಜ್ಜಂಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ ಇಲ್ಲಿದ್ದು, ಚಕ್ಕುಬಂದಿ : ಪೂರ್ವ: ಸುಲೋಚನಮ್ಮ, ಪಶ್ಚಿಮ: ರಸ್ತೆ, ಉತ್ತರ: ರಸ್ತೆ, ದಕ್ಷಿಣ: ಮೂರ್ತಿ.				
10	141369356	ಗೃಹ ಸಾಲ	1. ಎನ್. ಬಸವರಾಜ್ 2. ಕರಿಯಮ್ಮ ಎನ್.	10.10.2026	INR 8,42,163.28/-
	ಆಸ್ತಿ ವಿಳಾಸ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಖಾತಾ ಸಂ. 192/48, ಇ–ಆಸ್ತಿ ಸಂ. 151000203100120087–11ಬಿ, ವಿಸ್ತೀರ್ಣ 11 ಮೀ × 13 ಮೀ = 143 ಚ.ಮೀ., ಕಟ್ಟಡ ವಿಸ್ತೀರ್ಣ 143 ಚ.ಮೀ. ಇರುವ ಸಂಪೂರ್ಣ ಆಸ್ತಿ. ಹಿರೇಕಬ್ಬಿಗೆರೆ ಗ್ರಾಮ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಕರ್ನಾಟಕ ಇಲ್ಲಿದ್ದು, ಚಕ್ಕುಬಂದಿ : ಪೂರ್ವ: ಜಮೀನು, ಪಶ್ಚಿಮ: ಗುಡ್ಡಪ್ಪನ ಜಮೀನು, ಉತ್ತರ: ಖಾಲಿ ಜಾಗ, ದಕ್ಷಿಣ: ರಸ್ತೆ.				
11	147581192	ಗೃಹ ಸಾಲ	1. ನಾಗರಾಜ ಹಳ್ಳಪ್ಪ 2. ಅಂಜಿನಮ್ಮ ನಾಗರಾಜ	26.09.2026	INR 3,35,423.86/-
	ಆಸ್ತಿ ವಿಳಾಸ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿ ಸಂ. 440, ಇ–ಸ್ವತ್ತು ಸಂ. 151200601200320183 (ನಮೂನೆ ಸಂ. 11ಃ), ಪೂರ್ವ–ಪಶ್ಚಿಮ 4.8780 ಮೀಟರ್, ಉತ್ತರ–ದಕ್ಷಿಣ 11.5853 ಮೀಟರ್, ಒಟ್ಟು 56.51 ಚ.ಮೀ. ವಿಸ್ತೀರ್ಣದ ಸಂಪೂರ್ಣ ಆಸ್ತಿ. ಗುರುಸಿದ್ದಾಪುರ ಗ್ರಾಮ, ಗುರುಸಿದ್ದಾಪುರ ಗ್ರಾಮ ಪಂಚಾಯತಿ ವ್ಯಾಪ್ತಿ, ತಾಲ್ಲೂಕು: ಜಗಳೂರು, ಜಿಲ್ಲೆ: ದಾವಣಗೆರೆ, ಕರ್ನಾಟಕ–577513. ಇಲ್ಲಿದ್ದು, ಚಕ್ಕುಬಂದಿ : ಪೂರ್ವ: ರಂಗವಾರ ನಾಗಣ್ಣನ ಮನೆ, ಪಶ್ಚಿಮ: ಕೆ.ಎಸ್. ಶಿಲ್ಪಮ್ಮನ ಮನೆ, ಉತ್ತರ: ಖಾಲಿ ನಿವೇಶನ, ದಕ್ಷಿಣ: ರಸ್ತೆ.				

ಮೇಲಿನ ಕೋಷ್ಟಕದಲ್ಲಿ ತೋರಿಸಿರುವ ವಿವರಗಳ ಪ್ರಕಾರ, ಅವುಗಳ ಸಂಬಂಧಿತ ದಿನಾಂಕಗಳಿಂದ ಒಪ್ಪಂದದ ಬಡ್ಡಿದರ ಮತ್ತು ಇತರ ವೆಚ್ಚಗಳು, ಶುಲ್ಕಗಳು ಇತ್ಯಾದಿಗಳ ಪ್ರಕಾರ, ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಗೆ (ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿದೆ) ಮೊತ್ತವನ್ನು ಈ ಪ್ರಕಟಣೆಯ ದಿನಾಂಕದಿಂದ 60 ದಿನಗಳ ಒಳಗೆ ಪಾವತಿ ಮಾಡಬೇಕು, ತಪ್ಪಿದಲ್ಲಿ, ಕೆಳ ಸಹಿದಾರರರು ಸರ್ಫೇಸಿ ಕಾಯ್ದೆಯ ಸೆಕ್ಷನ್ 13 (4) ಮತ್ತು ಸೆಕ್ಷನ್ 14 ರ ಅಡಿಯಲ್ಲಿ, (ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂದಾಗಿದೆ) ಗೆ ಬಾಕಿ ಇರುವ ಮೊತ್ತವನ್ನು ವಸೂಲಿ ಮಾಡಲು ಸರ್ಫೇಸಿ ಕಾಯ್ದೆಯ ಸೆಕ್ಷನ್ 13 (4) ಮತ್ತು ಸೆಕ್ಷನ್ 14 ರ ಅಡಿಯಲ್ಲಿ ಕ್ರಮಗಳನ್ನು ಕೈಗೊಳ್ಳಲಿದ್ದಾರೆ. ಇದಲ್ಲದೆ, ಸದರಿ ಕಾಯಿದೆಯ ಸೆಕ್ಷನ್ 13 (13) ರ ಅಡಿಯಲ್ಲಿ ಸದರಿ ಭದ್ರತಾ ಸ್ವತ್ತುಗಳನ್ನು ನೀವು ಮಾರಾಟ/ಗುತ್ತಿಗೆ ಅಥವಾ ಬೇರೆ ರೀತಿಯಲ್ಲಿ ವರ್ಗಾಯಿಸುವುದನ್ನು ನಿರ್ಬಂಧಿಸಲಾಗಿದೆ.

ಸಹಿ/– ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್

ದಿನಾಂಕ : 20.10.2026
ಸ್ಥಳ : ಶಿವಮೊಗ್ಗ

(ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಗ ಹೊಂದಿ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಆಗಿದೆ)